ಆ) ಶ್ರೀ ಜೌಡರೆಡ್ಡಿ —ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಉದ್ಯಮಗಳ ಸಮಿತಿಯ ಳಿತಿನೇ ಳಿತಿನೇ ಹಾಗೂ ಳಿಳನೇ ವರದಿಗಳನ್ನೂ ಸಭೆಗೆ ಒಪ್ಪಿಸುತ್ತೇನೆ.

ಇ) ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೆ, ಅಧೀನ ಶಾಸನಾ ಸಮಿತಿಯ ೧ಳನೇ ವರದಿಯನ್ನೂ ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ವರದಿಗಳನ್ನೂ ಒಪ್ಪಿಸಲಾಯಿತು.

ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ
ದೂರವಾಣಿ ನೌಕರರು ಮುಷ್ಕರ ಮಾಡುತ್ತಿರುವುದು

† ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಬಹಳ ಪ್ರಮುಖವಾದ ಸಮಸ್ಯೆಯನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳ ಮತ್ತು ಸರ್ಕಾರದ ಗಮನಕ್ಕೆ ಈ ಸಂದರ್ಭದಲ್ಲಿ ತರಲಿಚ್ಛಿಸುತ್ತೇನೆ. ಕಳೆದ ಸುಮಾರು ಒಂದು ತಿಂಗಳಿನಿಂದ ದೂರವಾಣಿ ನೌಕರರು ಮುಷ್ಕರ ಮಾಡುತ್ತಿರುವುದರಿಂದ ಎಲ್ಲ ಕೆಲಸಗಳು ಸ್ಥಗಿತವಾಗಿವೆ. ತಹಶೀಲ್ದಾರರು, ಬಿಡಿಓ, ಸರ್ಕಲ್ ಇನ್ಸ್‌ಪೆಕ್ಟರ್, ಡೆಪ್ಯೂಟಿ ಕಮಿಷನರ್‌ಗಳನ್ನೆಲ್ಲ ಭೇಟಿ ಮಾಡಬೇಕೆಂದರೆ ನೀವೇ ಹೋಗಬೇಕಾಗುತ್ತದೆ. ಆದರೂ ಸಹ ಯಾವುದೇ ಕೆಲಸ ಮಾಡತಕ್ಕ ಪರಿಸ್ಥಿತಿಯಲ್ಲಿ ಇಲ್ಲ. ಇದು ಯಾವ ಮಟ್ಟಕ್ಕೆ ಹೋಗುತ್ತಿದೆ ಎಂದರೆ, ಲಾ ಅಂಡ್ ಆರ್ಡರ್ ಪ್ರಾಬ್ಲಂ ಕ್ರಿಯೇಟ್ ಆಗತಕ್ಕ ಸಂಭವ ಇದೆ. ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ ಕನ್ಸ್ಯೂಮರ್ಸ್ ಫ್ರಿ ಅಂಡ್ ಟಿ ಎಂಪ್ಲಾಯೀಸ್ ವಿರುದ್ಧವಾಗಿ ಹೋರಾಟ ಮಾಡುವುದಕ್ಕೆ ಹೊರಟ್ಟಿದ್ದಾರೆ. ಆ ಪರಿಸ್ಥಿತಿ ನಮ್ಮ ರಾಜ್ಯದಲ್ಲೂ ಬರುವ ಸಂಭವ ಇದೆ. ನಾಳೆ ಪ್ರಧಾನ ಮಂತ್ರಿಯವರು ಬೆಂಗಳೂರಿಗೆ ಬರುವವರಿದ್ದಾರೆಂದು ಪತ್ರಿಕೆಗಳ ಮೂಲಕ ತಿಳಿದಿದ್ದೇನೆ ಈ ಬಗ್ಗೆ ಸರ್ಕಾರ ಇದುವರೆಗೆ ಏನು ಕೆಲಸ ಮಾಡಿದೆ ? ಇದು ರಾಜ್ಯ ಸರ್ಕಾರದವರ ಕೈಯಲ್ಲಿ ಇಲ್ಲವೆಂದು ನಮಗೆ ಅರ್ಥವಾಗುತ್ತಿದೆ. ಆದರೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಮುಂಖ್ಯ ಮಂತ್ರಿಗಳು ಮಾತನಾಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅಥವಾ ಪರ್ಯಾಯ ವ್ಯವಸ್ಥೆ ಮಾಡುವುದಕ್ಕೆ ಯೋಚನೆ ಮಾಡಬೇಕಾಗುತ್ತದೆ. ಆಗ್ರಾ, ಹೈದ್ರಾಬಾದ್, ಸೆಕ್ಯುಂದರಾಬಾದ್‌ಗಳಲ್ಲಿರತಕ್ಕ ಸರ್ಕಾರ್ಸ್ ಹೇಳಿದ ಹಾಗೆ ಕೇಳಬೇಕು. ತಿವರು ಅನುಕೂಲಗಳನ್ನು ಪಡೆಯಬೇಕು ಎಂದು ಸರ್ಕಾರವನ್ನು ಹೆದರಿಸತಕ್ಕ ಬೆದರಿಸತಕ್ಕ ಪರಿಸ್ಥಿತಿ ಉದ್ಭವವಾಗಿದೆ. ಇದು ಎಲ್ಲರಿಗೂ ಸಂಬಂಧಪಟ್ಟಿದ್ದು. ಇವತ್ತಿನ ದಿವಸ ಇಡೀ ರಾಜ್ಯದ ಕೆಲಸ ಸ್ಥಗಿತವಾಗಿದೆ. ಆಡಳಿತ ಯಂತ್ರ ಸ್ಥಗಿತವಾಗಿದೆ, ಯಾರೂ ಕೆಲಸ ಮಾಡುವುದಕ್ಕಾಗುತ್ತಿಲ್ಲ. ಇವತ್ತಿನ ದಿವಸ ಬೆಲೆಗಳು ಜಾಸ್ತಿಯಾಗುತ್ತಿವೆ. ಏಕೆಂದರೆ ಯಾವ ರೀತಿ ಮಾರ್ಕೆಟ್‌ನಲ್ಲಿ ಬೆಲೆಗಳನ್ನು ಕೆಲವು ಹಿತಾಸಕ್ತಿಗಳು ಏರಿಸುತ್ತಾರೆಂದು ನಿಮಗೆ ಗೊತ್ತಿದೆ, ಪ್ರತಿಯೊಂದರ ಬೆಲೆಯೂ ಜಾಸ್ತಿಯಾಗುತ್ತಿದೆ. ಆದ್ದರಿಂದ ತಕ್ಷಣ ಮುಖ್ಯ ಮಂತ್ರಿಗಳು ಈ ಬಗ್ಗೆ ಹೆಚ್ಚಿನ ಗಮನ ಕೊಟ್ಟು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ.

† ಶ್ರೀ ಆರ್. ವಿ. ದೇಶಪಾಂಡೆ,—ಮಾನ್ಯ ಅಧ್ಯಕ್ಷರೆ, ಈಗ್ತಾಗಲೇ ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ನಾಳೆ ದಿವಸ ಪ್ರಧಾನಿಗಳು ಬೆಂಗಳೂರಿಗೆ ಬರುತ್ತಿದ್ದಾರೆ. ಮುಷ್ಕರ ಮಾಡುವುದು ಪಿ ಅಂಡ್ ಟಿ ಸಿಬ್ಬಂದಿಯವರ ಹಕ್ಕು ಇರಬಹುದು. ಆದರೆ ಉದ್ದೇಶಪೂರ್ವಕವಾಗಿ ಫೋನ್‌ಗಳನ್ನು ಡಿಸ್‌ಕನೆಕ್ಟ್ ಮಾಡುವುದು ಅವರ ಹಕ್ಕು ಅಲ್ಲ. ಇವತ್ತು ನನ್ನ ಫೋನ್ ಕೂಡ ಕೆಲಸ ಮಾಡುತ್ತಿಲ್ಲ. ಮಂತ್ರಿಗಳ ಫೋನ್, ವಿರೋಧ ಪಕ್ಷದ ನಾಯಕರ ಫೋನ್, ಮಂಖ್ಯ ಮಂತ್ರಿಗಳ ಫೋನ್‌ಗಳನ್ನೆಲ್ಲ ಡಿಸ್‌ಕನೆಕ್ಟ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆ ದೃಷ್ಟಿಯಿಂದ ಮಾನ್ಯ ಮುಖ್ಯ ಮಂತ್ರಿಗಳು ಪ್ರಧಾನ ಮಂತ್ರಿಗಳ ಗಮನಕ್ಕೆ ಈ ವಿಚಾರವನ್ನು ತಂದು ಸಮಸ್ಯೆಯನ್ನು ಪರಿಹರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅವರ ಬೇಡಿಕೆಗಳು ಇದ್ದರೆ ಸಾಲ್ವ್ ಮಾಡಲಿ, ಆದೆಕ್ಕೆ ನಾವು ಬೇಡ ಅನ್ನುವುದಿಲ್ಲ. ಆದರೆ ಅವರು ಈ ರೀತಿ ಶೊಂದರೆ ಮಾಡುವುದು ಸರಿಯಲ್ಲ. ಇವತ್ತಿನ ದಿವಸ ಅವರು ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಲಾಸ್ ಮಾಡಿದ್ದಾರೆ. ಕಮ್ಯೂನಿಕೇಷನ್ ಸ್ಥಗಿತವಾಗಿದೆ. ಆದ್ದರಿಂದ ನಾನು ಮತ್ತೊಮ್ಮೆ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ ಆದಷ್ಟು ಜಾಗ್ರತೆ ಕೇಂದ್ರ ಸರ್ಕಾರದ ಜೊತೆ ಸಂಪರ್ಕ ಮಾಡಿ ಇವರ ವಿರುದ್ಧ ಕಠೋರವಾದ ಕ್ರಮ ಕೈಗೊಳ್ಳುವುದಕ್ಕೆ ಹೇಳಬೇಕು. ನಮ್ಮ ಸರ್ಕಾರಕ್ಕೆ ಏನು ಕೋಟ್ಯಾಂತರ ರೂಪಾಯಿ ಹಾನಿಯಾಗಿದೆ

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ,

ಅದನ್ನು ಅವರ ಕಡೆಯಿಂದ ವಸೂಲ್ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಇದು ಸಾಧ್ಯವಾಗುವುದಿಲ್ಲ.

† ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ದೂರವಾಣಿ ನೌಕರರ ಮೇಲೆ ಕಠಿಣ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳತಕ್ಕದ್ದು ಸುಲಭ. ಆದರೆ ಅವರ ಬೇಡಿಕೆಗಳು ಇವೆ. ಅವರನ್ನು ರಾಜಿ ಮಾಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು ಸಂಪೂರ್ಣವಾಗಿ ಆ ಉದ್ಯೋಗಿಗಳ ತಲೆ ತೆಗೆಯುವುದಕ್ಕೆ ನಾನು ಒಪ್ಪುವುದಿಲ್ಲ. ಅವರ ಬೇಡಿಕೆಗಳ ಬಗ್ಗೆ ನಾವು ಏನು ಮಾಡಬೇಕು, ಏನು ಮಾಡಿದ್ದೇವೆ, ಕೇಂದ್ರ ಸರ್ಕಾರ ಜವಾಬ್ದಾರಿಯಿಂದ ಅವರ ಬೇಡಿಕೆಗಳನ್ನು ಈಡೇರಿಸುತ್ತಿದಿಯೇ ಎಂದು ನೋಡಬೇಕು. ಆ ಬಗ್ಗೆ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುವುದಾದರೆ, ಅವರ ಬೇಡಿಕೆಗಳ ಬಗ್ಗೆ ಮಧ್ಯಸ್ಥಿಕೆ ವಹಿಸಿ ಒಂದು ತೀರ್ಮಾನ ಮಾಡಿ ಅವರನ್ನು ರಾಜಿ ಮಾಡಲು ಪ್ರಯತ್ನ ಮಾಡುವುದೇ ಒಳ್ಳೆಯದು. ಈ ಬಗ್ಗೆ ಸಮಾಧಾನ ಒಂದು ತಿಂಗಳಿನಿಂದ ಗಂಭೀರವಾದ ಪರಿಸ್ಥಿತಿ ಉಂಟಾಗಿದೆ. ಬೇರೆ ಬೇರೆ ಕಡೆ ದೂರವಾಣಿ ಮೂಲಕ ಹೋಗತಕ್ಕೆ ಸುದ್ದಿ ಹೋಗದೆ ದೂರವಾಣಿ ಸಂಪೂರ್ಣವಾಗಿ ಸತ್ತಿದೆ ನಿಜ.

ಅದಕ್ಕೆ ಕಾರಣಗಳು ಅನೇಕ ಇವೆ. ಆ ಕಾರಣಗಳನ್ನು ಪರಿಶೀಲನೆ ಮಾಡಿ ಪಿ ಅಂಡ್ ಟಿ ಸಿಬ್ಬಂದಿ ವರ್ಗಕ್ಕೂ ಅನುಕೂಲವಾಗತಕ್ಕ ನಿರ್ಧಾರಕ್ಕೆ ಬರಬೇಕಾಗಿದೆ. ಅದು ಬಿಟ್ಟು ಸತ್ಯಾಗ್ರಹ ಮಾಡಿದವರನ್ನೆಲ್ಲಾ ಮನೆಗೆ ಕಳುಹಿಸಬೇಕು, ಅವರ ಕತ್ತನ್ನು ತೆಗೆಯಬೇಕು ಎಂಬ ನಿರ್ಧಾರ ಇದೆಯಲ್ಲ ಅದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಅವರಿಂದ ತಪ್ಪಾಗಿರಬಹುದು. ಆದರೆ ಅವರ ಬೇಡಿಕೆಗಳ ಬಗ್ಗೆ ಗಮನ ಹರಿಸಿ ಅವರ ಬೇಡಿಕೆಗಳಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಈಡೇರಿಸುವುದಕ್ಕೆ ಕೇಂದ್ರ ಸರ್ಕಾರ ಪ್ರಯತ್ನ ಮಾಡಬೇಕು ಎಂದು ಹೇಳಿ, ಮಾನ್ಯ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುವುದಾದರೆ ಈ ಬಗ್ಗೆ ಮಾತನಾಡಬೇಕು ಎಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಪ್ರೊ ಎಂ. ಡಿ. ನಂಜುಂಡ ಸ್ವಾಮಿ.—ಸನ್ಮಾನ್ಯ ಸಭಾಧ್ಯಕ್ಷರೆ, ಈ ಸಮಸ್ಯೆ ಬಗ್ಗೆ ಬೆಳಗ್ಗೆ ತಾನೆ ಯಾರೋ ಒಬ್ಬರು ಸಾಮಾನ್ಯ ಬಳಕೆದಾರರು ಒಂದು ಸಲಹೆ ಕೊಟ್ಟರು. ಅದನ್ನು ಹೇಳುವುದಕ್ಕೆ ನಾನು ಎದ್ದಿದ್ದೇನೆ. ಇದು ಸಾಮಾನ್ಯ ಬಳಕೆದಾರರ ಅಭಿಪ್ರಾಯ, ಈ ಕೇಂದ್ರ ಸರ್ಕಾರದ ಸೇವೆಯಲ್ಲಿರುವವರಿಗೆ ಸ್ವರ್ಗ ತಂದುಕೊಟ್ಟರೂ ಸಾಲದು. ಅವರು ಎಷ್ಟು ಸೊಕ್ಕಿದ್ದಾರೆ ಎಂದರೆ ಬಳಕೆದಾರರೇ ಅವರಿಗೆ ಪಾಠ ಕಲಿಸಬೇಕಾಗಿದೆ. ಅವಶ್ಯಕಸೇವೆಗಳು ಎಂದು ನಾವು ಇದನ್ನೆ ಕರೆಯುವುದು. They cannot take us for ransom, ಸಾಮಾನ್ಯ ಬಳಕೆದಾರರು ಇದರ ಬಗ್ಗೆ ಹೇಳಿದ್ದನ್ನು ಮಾಡಬೇಕು. ನಿಜವಾಗಿ ಇವತ್ತು ಬೆಳಿಗ್ಗೆ ನಡೆದಂಥ ವಿಚಾರ ಇದು ಶಾಸಕರ ಭವನದಲ್ಲಿ ಲಿಫ್ಟ್ ಹತ್ತುವಾಗ ಅವರು ಒಂದು ಸಲಹೆ ಕೊಟ್ಟರು. ಅದನ್ನು ಈ ಸಭೆಯ ಮುಂದೆ ಇಡುತ್ತಿದ್ದೇನೆ. ನಮಗೆ ಪ್ರತಿ ಚಳುವಳಿ ಮಾಡುವಂಥ ಅವಕಾಶ ಉಂಟು. ದೂರವಾಣಿಯವರ ಈ ಸಂಚಿನ ವಿರುದ್ಧ ಪ್ರತಿ ಚಳುವಳಿ ಮಾಡಬಹುದು. ಅವರು ಶೇಕಡ ೭೫ ಭಾಗ ಕ್ವಾರ್ಟರ್ಸ್‌ನಲ್ಲಿದ್ದಾರೆ. ಅವರಿಗೆ ಕುಡಿಯುವ ನೀರು ಮತ್ತು ವಿದ್ಯುಚ್ಛಕ್ತಿಯನ್ನು ನಾವು ನಿಲ್ಲಿಸಿದರೆ ನಾಳೆಯಿಂದ ಟೆಲಿಫೋನ್‌ಗಳು ಕೆಲಸ ಮಾಡುತ್ತವೆ. ಇಷ್ಟನ್ನು ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್.—ಕುಡಿಯುವ ನೀರನ್ನು ನಿಲ್ಲಿಸಿದರೆ ಅವರ ಹೆಂಗಸರು–ಮಕ್ಕಳ ಗತಿ ಏನು ?

ಡಾ॥ ಎಸ್. ಬಿ. ನಂಜಪ್ಪ —ಮಾನ್ಯ ಅಧ್ಯಕ್ಷರೆ, ಈ ಟೆಲಿಫೋನ್ ಸರ್ವೀಸ್ ಎಸ್ಸೆನ್ಷಿಯಲ್ ಸರ್ವೀಸ್ ಎಂದು ಮಾನ್ಯ ನಂಜುಂಡ ಸ್ವಾಮಿಯವರು ಹೇಳಿದ್ದಾರೆ. ಬೇರೆ ಕೆಲವು ಇಲಾಖೆಗಳು ಎಸ್ಸೆನ್ಷಿಯಲ್ ಸರ್ವೀಸ್ ಎಂದು ಏನಿವೆ ಅದೇ ತರಹ ಇದನ್ನೂ ಡಿಕ್ಲೇರ್ ಮಾಡಿ. ಆದರ ಜೊತೆಗೆ ಈಗ ಸಮಸ್ಯೆನ್ನು ಏನು ತೊಂದರೆಗೆ ಈಡು ಮಾಡಿದ್ದಾರೋ ಅದರ ಬಗ್ಗೆಯೂ ನೋಡಬೇಕು. ಏಕೆಂದರೆ, ನಮ್ಮ ಊರಿನಲ್ಲಿ ಗಲಭೆಯಾದಾಗ ಯಾವ ಕಡೆಯೂ ಸಂಪರ್ಕ ಮಾಡುವುದಕ್ಕೆ ಆಗದೆ ಎಸ್.ಪಿ.ಯವರನ್ನು ಮತ್ತು ಡಿ.ಐ.ಜಿ. ಅವರನ್ನು ರಿಕ್ವೆಸ್ಟ್ ಮಾಡಿಕೊಂಡು ಅವರ ಜೊತೆ ಹೋಗಿ ಬೆಂಗಳೂರಿಗೆ ಚೀಫ್ ಮಿನಿಸ್ಟರ್‌ಗೆ ಫೋನ್ ಮಾಡಬೇಕಾಗಿ ಬಂತು. ಇಂಥ ಪರಿಸ್ಥಿತಿ ಇರುವುದರಿಂದ ಜನರಿಗೆ ತೊಂದರೆಯಾಗಿದೆ. ಆ ನೌಕರರಿಗೆ ಸಾಕಷ್ಟು ಸಂಬಳ ಬರುತ್ತಿದೆ. ಅವರದು ಏನಾದರೂ ಬೇಡಿಕೆಗಳಿದ್ದರೆ ಡೆಮಾಕ್ರೆಟಿಕ್ ಸೆಟಪ್‌ನಲ್ಲಿ ಅದನ್ನು ಕೇಳತಕ್ಕದ್ದು ಅವರ ಕರ್ತವ್ಯ. ಆದರೆ ಕಮ್ಯೂನಿಕೇಷನ್ ಅಸ್ತವ್ಯಸ್ತ ಮಾಡಿ ಬೇಡಿಕೆಗಳ ಈಡೇರಿಕೆಗೆ ಅಪೇಕ್ಷೆ ಮಾಡುವುದು ಸರಿಯಲ್ಲ. ಆದ್ದರಿಂದ ಚೀಫ್ ಮಿನಿಸ್ಟರ್ ಅವರು ಕೇಂದ್ರಸರ್ಕಾರದ ಜೊತೆ ಕಾಂಟಾಕ್ಟ್ ಮಾಡಿ ಇದರ ಬಗ್ಗೆ ತೀವ್ರ ಕ್ರಮ ತೆಗೆದುಕೊಂಡು ಸಮಸ್ಯೆಯನ್ನು ಪರಿಹರಿಸಬೇಕು, ಜನರೂ ಕೂಡ ಇದರ ಬಗ್ಗೆ ಪ್ರತಿಭಟನೆ ಮಾಡಿದರೆ ಒಳ್ಳೆಯದು ಎಂದು ನನಗನ್ನಿಸುತ್ತದೆ.

ಶ್ರೀ ಜೆ. ಸಿ. ಮಾಧುಸ್ವಾಮಿ.—ಸನ್ಮಾನ್ಯ ಸಭಾಧ್ಯಕ್ಷರೆ, ಗ್ರಾಮಾಂತರ ಪ್ರದೇಶದಿಂದ ಬರುವವರು ಮ್ಯಾನುಯಲ್ ಎಕ್ಸ್‌ಚೇಂಜ್ ಕೆಳಗೆ ಸಂಪರ್ಕ ಮಾಡಬೇಕಾದುದು ಅನಿವಾರ್ಯ. ಎಕ್ಸ್‌ಚೇಂಜ್‌ನಲ್ಲಿರುವವರು ನಾವು ಕೇಳಿದ ನಂಬರ್ ಕೊಟ್ಟರೆ ಮಾತ್ರ ನಾವು ಸಂಪರ್ಕ ಮಾಡಬಹುದು. ಇಲ್ಲದೇ ಹೋದರೆ ಆಗುವುದಿಲ್ಲ. ಇಷ್ಟು ದಿವಸ ಟೆಲಿಫೋನ್ ಸಂಪರ್ಕ ಸತ್ತುಹೋಗಿವೆ ಎಂದು ಭಾವಿಸಬೇಕಾಗಿದೆ. ಆದ್ದರಿಂದ ದಯಮಾಡಿ ಅದರ ಮೇಲೆ ಬಿಲ್ ಮಾಡಬಾರದು. ಇದಕ್ಕೆ ಸಂಬಂಧಪಟ್ಟ ಕಾಸ್ಟ್ ಪೂರಾ ಆವರಿಂದ ವಸೂಲು ಮಾಡಬೇಕು ಎಂದು ನಾವು ಕೇಳಬೇಕಾಗುತ್ತದೆ. ತಾಲ್ಲೂಕುಗಳಲ್ಲಿ ಸಂಪರ್ಕ ಇಲ್ಲದೆ ಬಹಳ ಕಷ್ಟವಾಗಿದೆ ಆದ್ದರಿಂದ ಇದರ ಬಗ್ಗೆ ಗಮನ ಹರಿಸಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್,—ಸನ್ಮಾನ್ಯ ಅಧ್ಯಕ್ಷರೆ, ಟೆಲಿಕಮ್ಯುನಿಕೇಷನ್ ಸಿಬ್ಬಂದಿಯವರು ಮಾಡತಕ್ಕ ಹೋರಾಟ ಏನಿದೆ ಅದು ಸರಿಯಲ್ಲ. ಅವರ ಬೇಡಿಕೆಗಳು ಇರಬಹುದು. ಒಂದು ತಿಂಗಳಿಂದ ಈ ರಾಷ್ಟ್ರದಲ್ಲಿ ನಡೆದಿರತಕ್ಕ ಘಟನೆಗಳ ಹಿನ್ನೆಲೆಯಲ್ಲಿ ಸಂಪರ್ಕವ್ಯವಸ್ಥೆ ಸಂಪೂರ್ಣವಾಗಿ ನಿಂತಿದೆ. ಮೊನ್ನೆ ಎರಡು ದಿವಸದಿಂದ ನಮ್ಮ ಊರಿಗೆ ಫೋನ್ ಹಚ್ಚಬೇಕು ಎಂದು ಪ್ರಯತ್ನಪಟ್ಟರೆ ಆಗಲಿಲ್ಲ. ಟೆಲಿಫೋನ್ ಸಂಪರ್ಕ ಜನರಿಗೆ ಮುಖ್ಯವಾಗಿ ಬೇಕಾಗಿರತಕ್ಕ ಸಂಪರ್ಕ. ಇದು ಒಂದೇ ಊರಿನಲ್ಲಿ ಅಥವಾ ಒಂದೇ ಪಟ್ಟಣದಲ್ಲಿ ಆಗಿರುವ ಸಮಸ್ಯೆ ಅಲ್ಲ. ಇಷ್ಟಾದರೂ ಗ್ರಾಹಕರು ಸಹನೆಯಿಂದ ನಡೆದಿದ್ದಾರೆ. ನಾನು ಮುಖ್ಯಮಂತ್ರಿಗಳನ್ನು ಕೇಳುವುದು ಏನೆಂದರೆ, ಇದರ ಬಗ್ಗೆ ಏನಾದರೂ ನಿರ್ದಿಷ್ಟವಾದ ಕಾರ್ಯಕ್ರಮ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರುವ ಬಗ್ಗೆ ಮಾಡಿದ್ದಾರಾ? ಇಲ್ಲದೇಹೋದರೆ ತೊಂದರೆಯಾಗುತ್ತದೆ. ಅವರ ಬೇಡಿಕೆ ಇದ್ದರೆ ಪ್ರತಿಭಟನೆ ಮಾಡಲಿ. ಆದರೆ ಗ್ರಾಹಕರಿಗೆ ಈ ಪೀರಿಯಡ್‌ನಲ್ಲಿ ಏನು ತೊಂದರೆಯಾಗಿದೆ ಅದನ್ನು ತಪ್ಪಿಸಬೇಕು. ದೂರವಾಣಿಗಳ ಬಿಲ್ ಕಡಿಮೆ ಮಾಡುವುದು ಮಾತ್ರವಲ್ಲ. ದೂರವಾಣಿ ಸಂಪರ್ಕ ನಿಂತಿದ್ದರೂ ದೂರವಾಣಿಯ ಮೇಲಿನ ಬಾಡಿಗೆಯನ್ನೇನೂ ಕಡಿಮೆ ಮಾಡುವುದಿಲ್ಲ. ಇಂತಹ ಅವ್ಯವಸ್ಥೆ ಇರುವಾಗ ಅವರು ತಮ್ಮ ಕರ್ತವ್ಯವನ್ನು ನಿರ್ವಹಿಸದಿದ್ದರೆ ಅವರಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಆಲ್ಟರ್‌ನೇಟಿವ್ ವ್ಯವಸ್ಥೆಯನ್ನಾದರೂ ಕೂಡಾ ಮಾಡಬೇಕೆಂದು ಹೇಳುತ್ತೇನೆ. ಮುಖ್ಯಮಂತ್ರಿಗಳು ಇದರ ಬಗ್ಗೆ ಕೇಂಬ್ರಿಡ್ಜನೆ ನೇರ ಸಂಪರ್ಕ ಮಾಡಬೇಕಾಗುತ್ತದೆ ಇದರ ತೊಂದರೆ ಅವರಿಗೂ ಕೂಡಾ ಆಗಿರಬಹುದು ಅವರು ಶಾಸಕರಿಗೆ, ಜಿಲ್ಲಾಮಟ್ಟದ ಅಧಿಕಾರಿಗಳಿಂದನೆ ದೂರವಾಣಿ ಮೂಲಕ ಸಂಪರ್ಕಿಸಬೇಕಾದ ಸಮಯದಲ್ಲಿ ಅವರಿಗೂ ಇದರ ಬಿಸಿ ತಟ್ಟಿರುತ್ತದೆ ಮತ್ತೆ ದೂರಸಂಪರ್ಕ ಇಲಾಖೆಯ ನೌಕರವರ್ಗದವರು ಯಾರಿದ್ದಾರೆ ಅವರಿಗೂ ಈ ಸದನದ ಮುಖಾಂತರ ವಿನಂತಿ ಮಾಡುತ್ತೇನೆ. ರಾಷ್ಟ್ರದ ಸಂಪರ್ಕ ವ್ಯವಸ್ಥೆಗೆ ತೊಂದರೆ ಮಾಡುವುದರಿಂದ ಅವರಿಗೂ ಏನೂ ಲಾಭವಾಗುವುದಿಲ್ಲ. ರಾಷ್ಟ್ರದಲ್ಲಿನ ಗ್ರಾಹಕರೇನಾದರೂ ರೊಚ್ಚಿಗೆದ್ದರೆ, ಇಡೀ ವ್ಯವಸ್ಥೆಯನ್ನೇ ಅನಾಹುತಕ್ಕೆ ಈಡುಮಾಡುವ ಕಾರ್ಯಕ್ರಮಕ್ಕೆ ಅವರು ಕೈಹಾಕಬಹುದು. ಇಂತಹ ಪರಿಸ್ಥಿತಿ ಆಗಬಾರದು. ಸದನದ ಎಲ್ಲ ಸದಸ್ಯರಿಗೂ ಇದರ ಕೆಟ್ಟ ಅನುಭವ ಆಗಿದೆ. ಈ ಬಗ್ಗೆ ಸರ್ಕಾರ ವಿಶೇಷ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎನ್. ಜಿ. ನಾಯಕ್.—ಅಧ್ಯಕ್ಷರೇ, ಇದು ಬಹಳ ಗಂಭೀರವಾದ ಪ್ರಶ್ನೆ ಇದೆ. ಇವತ್ತು ಮಂತ್ರಿಮಂಡಲದ ಸದಸ್ಯರಿಗೆ ಸಂಪರ್ಕವ್ಯವಸ್ಥೆ ಸರಿಯಾಗಿದೆ. ಅದರೆ ಶಾಸಕರಿಗೆ ದೂರವಾಣಿ ಸಂಪರ್ಕ ವ್ಯವಸ್ಥೆ ಸರಿಯಾಗಿಲ್ಲ. ಎಲ್ಲದಕ್ಕೂ ನಾವೇ ಜವಾನರಂತೆ ತಿರುಗಾಡಬೇಕಾದ ಪರಿಸ್ಥಿತಿ ಬಂದಿದೆ. ಇವತ್ತು ಪರಿಸ್ಥಿತಿ ಚೆನ್ನಾಗಿಲ್ಲ, ಆದ್ದರಿಂದ ಮೊದಲು ಶಾಸಕರ ಭವನದಲ್ಲಿನ ದೂರವಾಣಿ ಸಂಪರ್ಕ ವ್ಯವಸ್ಥೆಯನ್ನು ಜಾಗ್ರತೆ ಸರಿಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಭೈರೇಗೌಡ.—ಮಾನ್ಯ ಅಧ್ಯಕ್ಷರೇ, ಕಾರ್ಮಿಕರು ತಮ್ಮ ನ್ಯಾಯಬದ್ಧವಾದ ಹೋರಾಟ ಮಾಡುವುದರಲ್ಲಿ ಮುಷ್ಕರ ಮಾಡತಕ್ಕದ್ದು, ಸತ್ಯಾಗ್ರಹ ಮಾಡತಕ್ಕದ್ದು ಅವರ ಆಜನ್ಮ ಸಿದ್ಧ ಹಕ್ಕು, ಅದಕ್ಕೆ ಚ್ಯುತಿ ತರುವುದಕ್ಕೆ ಯಾರಿಗೂ ಅಧಿಕಾರ ಇಲ್ಲ; ಸಾಧ್ಯವಿಲ್ಲ. ಆದು ಒಂದು ಕಡೆಯಾದರೆ ಮತ್ತೊಂದು ಕಡೆ ಏನಾಗಿದೆ ಎಂದರೆ, ಎಲ್ಲೋ ಒಂದು ಕಡೆ ಬೆಂಕಿ ಬೀಳುತ್ತದೆ ಆಗ ಮೊದಲು ಅಗ್ನಿಶಾಮಕ ದಳಕ್ಕೆ ಫೋನ್ ಮಾಡಬೇಕಾಗುತ್ತದೆ. ಆಕ್ಸಿಡೆಂಟ್ ಆದರೆ ಆಂಬುಲೆನ್ಸ್‌ಗೆ ಫೋನ್ ಮಾಡಬೇಕಾಗುತ್ತದೆ. ಗಲಭೆಯಾದರೆ ಒಂದೂ ಕ್ಷಣ ತಡಮಾಡದೇ ಪೋಲೀಸ್‌ಗೆ ಫೋನ್ ಮಾಡಬೇಕಾಗುತ್ತದೆ. ಇದ್ಯಾವುದಕ್ಕೂ ಇವತ್ತು ಸಾಧ್ಯವಾಗುತ್ತಾ ಇಲ್ಲ. ಇವತ್ತು ಆಪಘಾತಗಳಲ್ಲಿ ಎಷ್ಟು ಜನರ ಪ್ರಾಣ ಹೋಯಿತು, ಬೆಂಕಿ ಅನಾಹುತಗಳು ಎಷ್ಟು ಆಗುತ್ತಿವೆ ಎಂಬುದನ್ನು ತಿಳಿಯಲು ಸಂಪರ್ಕ ವ್ಯವಸ್ಥೆ ಇಲ್ಲ. ಇವತ್ತು ನಮ್ಮ ಸಮಾಜದಲ್ಲಿ ಟೆಲಿಫೋನ್ ಎನ್ನುವುದು ಜೀವನಾವಶ್ಯಕಗಳಲ್ಲಿ

ಒಂದಾಗಿದೆ. ಇವತ್ತು ಕೆಲವು ದೂರವಾಣಿಗಳನ್ನು ಉದ್ದೇಶಪೂರ್ವಕವಾಗಿಯೇ ಕ್ರಿಪಲ್ ಮಾಡಿ ಕೆಡಿಸುತ್ತಿದ್ದಾರೆ. ಇದು ಬಹಳ ಅನ್ಯಾಯ. ನಾನು ಕಾರ್ಮಿಕರ ಪರವಾಗಿ ಮಾತನಾಡಿದರೂ ಕೂಡಾ ಈ ರೀತಿಯ ಘಟನೆಗಳು ನಡೆದರೆ ನಾನಲ್ಲ, ನಿಷ್ಪಕ್ಷಪಾತವಾಗಿ ಆಲೋಚನೆ ಮಾಡುವವರೂ ಕೂಡಾ ಇದನ್ನು ಖಂಡನೆ ಮಾಡಬೇಕಾಗುತ್ತದೆ. ಇವತ್ತಿನದಿವಸ ನಿಮ್ಮ ಕಛೇರಿಗೆ ಬಂದು ದೂರವಾಣಿ ಮಾಡಬೇಕಾದ ಪರಿಸ್ಥಿತಿ ಬಂತು. ಇವತ್ತು ನಾವು ಏನೂ ಕೆಲಸ ಮಾಡದ ಪರಿಸ್ಥಿತಿಗೆ ಬಂದಿದ್ದೇವೆ. ನಮ್ಮ ಕ್ಷೇತ್ರದಲ್ಲಿ ಓಡಾಡೋಣವೆಂದರೆ ಡೀಸೆಲ್ ಇಲ್ಲ. ಕ್ಷೇತ್ರದ ಬಗ್ಗೆ ವಿಚಾರ ತಿಳಿಯಲು ದೂರವಾಣಿ ಮೂಲಕ ಸಂಪರ್ಕ ಪಡೆಯುವಹಾಗೆ ಇಲ್ಲ. ೨೦ನೇ ಶತಮಾನದ ಅಂತ್ಯದಲ್ಲಿ ಶಿಲಾಯುಗದಲ್ಲಿ ಇದ್ದಂತೆ ನಾವು ಇದ್ದೇವೆ.

ಶ್ರೀ ವಾಟಾಳ್ ನಾಗರಾಜ್.—ದೂರವಾಣಿ ಕದ್ದಾಲಿಕೆ ತಪ್ಪಿದೆ.

ಶ್ರೀ ಸಿ. ಭೈರೇಗೌಡ.—ಮಾನ್ಯ ವಾಟಾಳ್ ನಾಗರಾಜ್ ಅವರಂ ಮುಷ್ಕರ ನಿರತರ ಮನೆಗಳಿಗೆ ನೀರಿನ ಸಂಪರ್ಕವನ್ನು ಬಂದ್ ಮಾಡುವುದು ಬೇಡ, ಆ ಮುಷ್ಕರ ನಿರತರ ಹೆಂಡಿರು ಮಕ್ಕಳು ಏನು ಮಾಡಿದ್ದಾರೆ ? ಇದರಿಂದ ಅವರಿಗೆ ತೊಂದರೆ ಆಗುವುದಿಲ್ಲವೇ ಎಂದರು.

ಶ್ರೀ ವಾಟಾಳ್ ನಾಗರಾಜ್ ಅವರ ಮನೆಯಲ್ಲೇ ನೀರು ಬರದಿದ್ದರೆ ಆಗ ನೀವು ನೀರು ಸರಬರಾಜು ಮಂಡಲಿಗೆ ಟೆಲಿಫೋನ್ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಹಾಗಾದ ಪಕ್ಷದಲ್ಲಿ ನಾನು ಸೈಕಲ್ ಮೇಲೆ ಹೋಗಂತ್ತೇನೆ.

ಶ್ರೀ ಸಿ. ಭೈರೇಗೌಡ.—ಅವರೇನೋ ಹೋಗಬಹುದು. ನನಗೆ ನಡೆದುಕೊಂಡೇ ಹೋಗುವುದಕ್ಕೆ ಆಗುವುದಿಲ್ಲ. ನನ್ನ ಕಾಲು ಐಬು ಇದೆ. ನಾನೇನು ಮಾಡಲಿ ?

ಅವರು ಯಾವ ರೀತಿ ನಮ್ಮ ದೂರವಾಣಿಗಳನ್ನು ಹುಡುಕಿ ಹುಡುಕಿ ಕನೆಕ್ಷನ್ ಅನ್ನು ತಪ್ಪಿಸಿದ್ದಾರೆ ಅದೇ ರೀತಿಯಲ್ಲಿ ನೀವೂ ಕೂಡ ಅವರ ಮನೆಗಳನ್ನು ಹುಡುಕಿ ಅವರ ಮನೆಗಳಿಗೆ ನೀರು, ವಿದ್ಯುಚ್ಛಕ್ತಿ ಕನೆಕ್ಷನ್ ಅನ್ನು ತಪ್ಪಿಸಬೇಕು. ಈ ಅಧಿಕಾರ ರಾಜ್ಯ ಸರಕಾರದ ಕೈಯಲ್ಲಿ ಇದೆ. ಇದನ್ನು ತಕ್ಷಣ ಮಾಡಬೇಕೆಂದು ನಾನು ವಿನಂತಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ನಂಜುಂಡಸ್ವಾಮಿಯವರು ಬರೀ ವಿದ್ಯುಚ್ಛಕ್ತಿ, ನೀರನ್ನು ಕುರಿತು ಹೇಳಿದರು, ನೀವೂ ಕೂಡ ಅದೇ ಹೇಳುತ್ತಿದ್ದೀರಿ. ನೀವು ಅದಕ್ಕೆ ಏನಾದರೂ ಸೇರಿಸುತ್ತೀರೇನೋ ಎಂದು ನಾನು ತಿಳಿದಿದ್ದೆ.

ಶ್ರೀ ಹರ್ಷಕುಮಾರಗೌಡ —ಯಾರೇ ಸರಕಾರಿ ನೌಕರರು ಇರಲಿ, ಉದ್ಯಮದಲ್ಲಿರುವವರು ಇರಲಿ, ಅವರು ಚಳುವಳಿ ಮಾಡುವುದಕ್ಕೆ ಅವರದ್ದೇ ಆದಂತಹ ಅವಕಾಶಗಳು ಇವೆ. ಆದರೆ ಅವರು ಹೋಗುತ್ತಿರುವ ಮಾರ್ಗ ಏನು ಇದೆ ಅದು ಸರಿಯಾದಂತಹ ಮಾರ್ಗ ಅಲ್ಲ, ತಪ್ಪು ಮಾರ್ಗ. ಯಾವುದೇ ಚಳುವಳಿ ಮಾಡಿದರೂ ಕೂಡ ಅದು ಜನರನ್ನು ಸ್ಪಂದಿಸುವಂತಹ ಚಳುವಳಿಯಾಗಬೇಕು, ಆದರೆ ಇದು ಅದರ ವಿರುದ್ಧವಾದಂತಹ ಚಳುವಳಿಯಾಗಿದೆ. ಅವರು ನಮ್ಮ ಅಗತ್ಯ ಸೇವೆಗಳು ಏನು ಇವೆ ಅವುಗಳನ್ನು ತಡೆಹಿಡಿಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಅವರಿಗೆ ದೊರಕುತ್ತಿರುವ ಅಗತ್ಯ ಸೇವೆಗಳು ಏನು ಇವೆ. ಅವುಗಳನ್ನು ನಿಲ್ಲಿಸುವಂತಹ ಕೆಲಸ ಮಾಡಿದಾಗ ಮಾತ್ರ ಇಂತಹ ಸಮಾಜ ವಿರೋಧಿ ಚಳುವಳಿಗಳನ್ನು ತಡೆಹಿಡಿಯುವುದಕ್ಕೆ ಸಾಧ್ಯವಾಗುತ್ತದೆಂದು ನನ್ನ ಭಾವನೆ, ಶಾಸಕರ ಭವನದಲ್ಲಿನ ನಮ್ಮ ಸಂಪರ್ಕ ಮಾಧ್ಯಮವನ್ನು ಕೂಡ ನಿಲ್ಲಿಸಿರುವಂತಹ ಸಂಪರ್ಕ ಮಾಧ್ಯಮವನ್ನು ಅಸ್ತವ್ಯಸ್ತಗೊಳಿಸಿರುವಂತ ಹ ಈ ದೂರವಾಣಿ ಇಲಾಖೆಯವರ ಮುಷ್ಕರ ಏನು ಇದೆ ಇದನ್ನು ನಾವು ತಡೆಯದೇ ಇದ್ದರೆ ಬೇರೆಯವರೂ ಕೂಡ ಇದೇ ಮಾರ್ಗವನ್ನು ಅನುಸರಿಸುವುದಕ್ಕೆ ಅವಕಾಶ ಮಾಡಿಕೊಟ್ಟ ಹಾಗಾಗುತ್ತದೆ. ಇದನ್ನು ತಡೆಯುವಂತಹ ಪ್ರಾಮಾಣಿಕ ವ್ಯವಸ್ಥೆಯಾಗಬೇಕು.

ಅಧ್ಯಕ್ಷರು.—ಈ ವಿಚಾರದಲ್ಲಿ ಯಾವ ಸದಸ್ಯರಾದರೂ ತಮ್ಮ ಪ್ರಾಮಾಣಿಕ ಅನಿಸಿಕೆಗಳನ್ನು ಹೇಳಬೇಕೆಂದು ಇದ್ದರೆ ಹೇಳಬಹುದು.

ಶ್ರೀ ಎಲ್: ಆರ್. ಶಿವರಾಮೇಗೌಡ.—ಕಳೆದ ಪತ್ತಾರು ದಿವಸಗಳಿಂದ ಸಂಪರ್ಕ ಮಾಧ್ಯಮವಾದ ದೂರವಾಣಿ ವ್ಯವಸ್ಥೆ ಬಹಳಷ್ಟು ಅಸ್ತವ್ಯಸ್ತವಾಗಿದೆ. ಮಾನ್ಯ ನಂಜುಂಡಸ್ವಾಮಿಯವರು, ಶ್ರೀ ಬೈರೇಗೌಡರು ಇದರ ಬಗ್ಗೆ ಅವರದ್ದೇ ಆದಂತಹ ಧಾಟಿಯಲ್ಲಿ ಅವರಿಗೆ ಏನು ತೊಂದರೆ ಕೊಡಬಹುದು ಎಂಬ ಬಗ್ಗೆ ಸೂಚನೆ ಮಾಡಿದ್ದಾರೆ. ರಾಜಕೀಯ ಮುಖಂಡರು ಶಾಸಕರು ಯಾರು ಇದ್ದಾರೆ ಇವರುಗಳ ಪಟ್ಟಿಯನ್ನು ತೆಗೆದುಕೊಂಡು ಅವರ ದೂರವಾಣಿಗಳನ್ನು ಡಿಸ್‌ಕನೆಕ್ಟ್ ಮಾಡಿರುವುದರಿಂದಾಗಿ ಅವರಿಗೆ ಈ ಬಿಸಿ ತಗುಲಿದೆಯೇ ಹೊರತು ರಾಜ್ಯದ ಎಲ್ಲಾ ಜನರಿಗೆ ತಗಲಿಲ್ಲ.

ಇಡೀ ರಾಜ್ಯದ ಎಲ್ಲಾ ದೂರವಾಣಿ ಸಂಪರ್ಕವನ್ನು ನಿಲ್ಲಿಸಿದ್ದರೆ ಆದರ ಬಿಸಿ ಬಹಳ ಜೋರಾಗಿ ತಗಲುತ್ತಿತ್ತು. ಈಗ ಏನಾಗಿದೆ ಎಂದರೆ ನಾವು ಯಾವ ರೀತಿಯ ಸಂಪರ್ಕವನ್ನು ಪಡೆಯಬೇಕಾದರೂ ಕೂಡ ಕಷ್ಟವಾಗುತ್ತಿದೆ. ಬೈರೇಗೌಡರು ಹೇಳಿದ ಹಾಗೆ ಊರಿಗೆ ಹೋಗೋಣವೆಂದರೆ ಡೀಸಲ್ ಸಿಕ್ಕುವುದಿಲ್ಲ. ದೂರವಾಣಿಯಲ್ಲಿ ಸಂಪರ್ಕ ಮಾಡೋಣವೆಂದರೆ ಅದೂ ಸಿಕ್ಕುವುದಿಲ್ಲ. ಮಾನ್ಯ ಹರ್ಷಕುಮಾರಗೌಡರು ಹೇಳಿದ ಹಾಗೆ ಮಂತ್ರಿಗಳ ನಿರತರು ಇಂತಹ ಸಹಜಾಪ್ತಾತಂಕ ವ್ಯವಸ್ಥೆಯನ್ನು ಏನು ಇಟ್ಟುಕೊಂಡಿದ್ದಾರೆ ಅದನ್ನು ತಪ್ಪಿಸುವುದಕ್ಕೆ ಸೂಕ್ತವಾದ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕೆಂದು ಈ ಸದನದ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ, ನಾನು ಬಹಳ ಬೇಸರದಿಂದ ಪ್ರಾಮಾಣಿಕವಾಗಿ ಹೇಳತಕ್ಕಂತಹ ವಿಚಾರ ಇದಾಗಿದೆ. ಈಗ ದೂರವಾಣಿ ವಿಜ್ಞಾನದಲ್ಲಿ ನಾವುಗಳು ಬಹಳ ಮುಂದುವರಿದಿದ್ದೇವೆ. ಅದರಿಂದ ಬಹಳ ಲಾಭವಾಗಿದೆ, ಇವತ್ತು ಅದು ನಮ್ಮ ಜೀವನದಲ್ಲಿ ಅತ್ಯಾವಶ್ಯಕವಾಗಿದೆ ಹಿಂದೆ ಪಾರಿವಾಳಗಳ ಕಾಲಿಗೆ ಚೀಟಿ ಕಟ್ಟಿ, ಕಳಿಸುತ್ತಿದ್ದರು, ಒಂಟೆ ಮೇಲೆ ಕಳಿಸುತ್ತಿದ್ದರು, ಆದರೆ ಈಗ ವಿಜ್ಞಾನ ಬಹಳ ಮುಂದುವರೆದಿದೆ. ಇಂತಹ ಸಂದರ್ಭದಲ್ಲಿ ನಾವುಗಳು ಇದನ್ನೇ ನಂಬುವಂತಹ ಮಟ್ಟಕ್ಕೆ ಬಂದಿದ್ದೇವೆ: ನನ್ನ ಮಟ್ಟಿಗೆ ಹೇಳುವುದಾದರೆ, ನನ್ನ ಊರಿನಲ್ಲಿ ನನಗೆ ಬೇಕಾದವ ರೊಬ್ಬರು ಅಸೌಖ್ಯದಲ್ಲಿದ್ದರು. ಅವರ ಬಗ್ಗೆ ವಿಚಾರ ಮಾಡಬೇಕೆಂದು ಯಾವ್ಯಾವ ರೂಪದಲ್ಲಿ ದೂರವಾಣಿ ಮಾಡುವುದಕ್ಕೆ ಪ್ರಯತ್ನ ಮಾಡಿದರೂ ಕೂಡ ಸಂಪರ್ಕ ಸಿಗಲೇ ಇಲ್ಲ. ಅದೇ ರೀತಿಯಲ್ಲಿ ಊರಿನಲ್ಲಿ ಘರ್ಷಣೆಯಾದಾಗ ಎಸ್.ಪಿ. ಹತ್ತಿರ ಮಾತನಾಡಬೇಕೆಂದು ಹೇಳಿದರೂ ಕೂಡ ದೂರವಾಣಿ ಸಿಗಲಿಲ್ಲ. ಆಗ ನನಗೆ ಬಹಳ ಬೇಸರವಾಯಿತು. ಒಂದು ನೂರು ರೂಪಾಯಿಯ ಪ್ರಶ್ನೆಗೆ ಹೀಗೆ ಮಾಡುವುದು ಸರಿಯಲ್ಲ. ಇದರ ಬಗ್ಗೆ ಮುಖಂಡರು ಭರವಸೆ ಕೊಟ್ಟರೂ ಕೂಡ ಹೀಗೆ ಮಾಡುವುದು ಸರಿಯಲ್ಲ. ಇದರಿಂದ ಬಹಳಷ್ಟು ಜನರಿಗೆ ಉಪದ್ರವವಾಗಿದೆ, ಸಾಮ, ದಾನ, ದಂಡ ಎಂಬ ಬಗ್ಗೆ ಮಾನ್ಯ ನಂಜುಂಡಸ್ವಾಮಿಯವರು ಹೇಳಿದಂತಹ ಮಾತು ಏನು ಇದೆ, ಹಾಗೆ ಮಾಡುವುದು ಒಳ್ಳೆಯದೆಂದು ನನ್ನ ಅನಿಸಿಕೆ.

ಶ್ರೀ ಎನ್. ಜಿ. ನಾಯಕ್.—ಹಿಂದಿನ ಕಾಲದಲ್ಲಿ ಪಾರಿವಾಳಗಳಿಂದ ಮೆಸೇಜ್ ಕಳಿಸುತ್ತಿದ್ದರು. ಹಾಗೇ ನಮಗೂ ಪಾರಿವಾಳಗಳನ್ನು ಕೊಡಿ, ಚೀಟಿ ಬರೆದು ಅವುಗಳ ಕಾಲಿಗೆ ಕಟ್ಟಿ ಕಳಿಸುತ್ತೇವೆ.

ಅಧ್ಯಕ್ಷರು,—ಒಂದೊಂದು ಪಾರಿವಾಳ ಸಾಕೋ ಅಥವಾ ಜಾಸ್ತಿ ಕಳಿಸುವುದಕ್ಕೆಂದು ಎರಡನ್ನು ಕೊಡಬೇಕೋ ?

† ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಕಳೆದ ಒಂದು ತಿಂಗಳಿಂದ ದೂರವಾಣಿ ಸಂಪರ್ಕ ನಿಂತು ಹೋಗಿ ಸಾರ್ವಜನಿಕರಿಗೆ ತುಂಬಲಾರದ ನಷ್ಟವಾಗಿದೆ, ಇದುವರೆಗೆ ಕೇಂದ್ರ ಸರ್ಕಾರ ಈ ಬಗ್ಗೆ ಯಾವುದೇ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಲಿಲ್ಲ. ಅವರ ಬೇಡಿಕೆಗಳು ನ್ಯಾಯಯುತವಾಗಿದ್ದರೆ ಈಡೇರಿಸಬೇಕು. ಇಲ್ಲದಿದ್ದರೆ ಅದಕ್ಕೆ ಸಮಯ ತೆಗೆದುಕೊಳ್ಳಬೇಕು, ಅದು ಆಗದಿದ್ದರೆ ಮಾತುಕತೆ ನಡೆಸಿ ಬಗೆಹರಿಸಬೇಕು. ಅದು ಸಾಧ್ಯವಾಗದಿದ್ದರೆ ಬೇರೆ ವ್ಯವಸ್ಥೆಯನ್ನು ಮಾಡುವುದಕ್ಕೆ ಕೇಂದ್ರ ಸರ್ಕಾರ ಮುಂದೆ ಬರಬೇಕು. ಇದು ಯಾವುದನ್ನೂ ಮಾಡದೇ ಇದ್ದಾರೆ. ಹೇಳುವವರು ಕೇಳುವವರು ಯಾರೂ ಇಲ್ಲವೆಂದು ಕಾಣುತ್ತದೆ. ಇವತ್ತು ದೇಶದಲ್ಲಿ ಅನೇಕ ಕೆಲಸ ಕಾರ್ಯಗಳು ನಡೆಯುತ್ತಿವೆ. ನಾನು ರಾಜ್ಯ ಸರ್ಕಾರವನ್ನು ಕೇಳುವುದಕ್ಕೆ ಇಷ್ಟ ಪಡುತ್ತೇನೆ. ಇದು ಕೇಂದ್ರ ಸರ್ಕಾರದ ವಿಷಯವಾದರೂ ಕೂಡ ರಾಜ್ಯ ಸರ್ಕಾರ ಈ ತೊಂದರೆಯ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆದು ಅದನ್ನು ಸರಿಪಡಿಸುವಂತಹ ಪ್ರಯತ್ನವನ್ನಾದರೂ ನಮ್ಮ ರಾಜ್ಯದ ಹಿತದೃಷ್ಟಿಯಿಂದ ತಾವೇನು ಮಾಡಿದ್ದೀರಿ ? ರಾಜ್ಯ ಮತ್ತು ಕೇಂದ್ರ ಸರ್ಕಾರ ಎರಡು ಕೈಕಟ್ಟಿ ಕುಳಿತಿರುವುದರಿಂದ ಕರ್ನಾಟಕ ರಾಜ್ಯದ ಲಕ್ಷಾಂತರ ಜನತೆಗೆ ತೊಂದರೆಯಾಗುತ್ತಿದೆ. ಸಾವು ನೋವಾಗಲಾದರೂ ಟೆಲಿಗ್ರಾಮ್ ಮೂಲಕ ಸುದ್ದಿಯನ್ನು ಮುಟ್ಟಿಸುವುದಕ್ಕೆ ಆಗುವುದಿಲ್ಲ. ಪತ್ರಿಕೆಗಳಲ್ಲಿ ವಿಷಯ ಬಂದಿದೆ. ಮಂತ್ರಿಗಳು ಇನ್ನೊಬ್ಬರೆ ಜೊತೆ ಮಾತನಾಡುವುದಕ್ಕೆ ಸಂಪರ್ಕ ಸಿಗುತ್ತಿಲ್ಲ. ಮಂತ್ರಿಗಳ ಪರಿಸ್ಥಿತಿಯೇ ಹೀಗಾದರೆ ಇನ್ನು ಶಾಸಕರ ಗತಿಯೇನು ? ಇವತ್ತು ಹೇಳುವವರು ಕೇಳುವವರು ಯಾರು ಇಲ್ಲವೆ ? ಪ್ರಜಾಪ್ರಭುತ್ವ ಇದೆಯೋ ಇಲ್ಲವೋ ಎನ್ನುವುದನ್ನು ಜನ ಯೋಚನೆ ಮಾಡುವ ಸ್ಥಿತಿಗೆ ಬಂದಿದ್ದಾರೆ. ಜನರ ಪ್ರತಿನಿಧಿಗಳನ್ನಾಗಿ ನಮ್ಮನ್ನು ಆರಿಸಿ ಕಳಿಸಿದ್ದಾರೆ. ಶಾಸಕರು ಇರಬಹುದು, ಲೋಕಸಭಾ ಸದಸ್ಯರು ಇರಬಹುದು. ಅವರ ಬಗ್ಗೆ ಜನ ಸಂಶಯದಿಂದ ನೋಡುವಂತಹ ಪರಿಸ್ಥಿತಿ ಬಂದಿದೆ. ಸಾರ್ವಜನಿಕರ ನೋವನ್ನು ಬಗೆಹರಿಸುವುದಕ್ಕೆ ನಾಗರೀಕರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಆಗುವುದಿಲ್ಲವೆಂದರೆ ಅಂತಹ ಒಂದು ವಾತಾವರಣ ಚುನಾಯಿತ ಪ್ರತಿನಿಧಿಗಳಿಗೆ ಇರುವುದಾದರೆ ಜನಗಳು ನಮ್ಮನ್ನು ಅನುಮಾನದಿಂದ ನೋಡುವಂತಹ ವಾತಾವರಣ

ಉಂಟಾಗಿದೆ. ನಾನು ರಾಜ್ಯಸರ್ಕಾರದ ಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಏನಾದರೂ ಕೇಂದ್ರ ಸರ್ಕಾರದ ಜೊತೆ ಸಂಪರ್ಕ ಮಾಡಿ ವೈಯಂಕ್ತಿವಾಗಿ ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಗಳನ್ನು ಸಂಬಂಧಪಟ್ಟ ಮಂತ್ರಿಗಳನ್ನು ಭೇಟಿ ಮಾಡಿ ಸಮಸ್ಯೆಯನ್ನು ಬಗೆ ಹರಿಸುವುದಕ್ಕೆ ತಾವು ಪ್ರಯತ್ನ ಪಟ್ಟಿದ್ದೀರಾ ? ಮಾತನಾಡಿದ್ದೀರಾ? ಅಥವಾ ಏನಾದರೂ ಪತ್ರವ್ಯವಹಾರವನ್ನು ನಡೆಸಿದ್ದೀರಾ ? ಆದರ ಬಗ್ಗೆ ನಮ್ಮ ಸರ್ಕಾರದ ನಿಲುವೇನು ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ವಿನಂತಿ ಮಾಡುತ್ತೇನೆ. ಇದಕ್ಕೆ ರೆಸ್ಯೂಲ್ಯೂಷನ್ ಮಾಡುವ ಅಗತ್ಯ ವಿದೆಯೇ ? ಮೊದಲನೆಯದಾಗಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಲ್ಟರ್‌ನೇಟಿವ್ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಸದನದಲ್ಲಿ ಆ ಕಡೆಯವರು ಈ ಕಡೆಯವರು ಒಂದಾಗಿ ಈ ಬಗ್ಗೆ ಒಂದು ರೆಸಲ್ಯೂಷನ್ ಮಾಡುವ ಅಗತ್ಯ ವಿದೆಯೇ ? ಅಗತ್ಯ ಇದ್ದರೆ ರೆಸಲ್ಯೂಷನ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಡಬೇಕು. ಕೇಂದ್ರ ಸರ್ಕಾರ ಕಣ್ಣುಮುಚ್ಚಿ ಕೊಂಡು ಕುಳಿತಿರುವ ಈ ಸಂದರ್ಭದಲ್ಲಿ ಅಗತ್ಯವಿದ್ದರೆ ರೆಸಲ್ಯೂಷನ್ ಮಾಡಿ ಕಳುಹಿಸಿ ಕೊಡಬೇಕು. ಕೇಂದ್ರ ಸರ್ಕಾರ ಇತ್ತ ಗಮನ ಹರಿಸುವಂತೆ ಮಾಡಬೇಕು. ಇವತ್ತು ಜನ ಬೀದಿಗಿಳಿಯುತ್ತಿದ್ದಾರೆ. ಈ ಕೆಲಸ ಕೇಂದ್ರ ಸರ್ಕಾರದ್ದೊ, ರಾಜ್ಯ ಸರ್ಕಾರದ್ದೊ ಎಂದು ಜನತೆಗೆ ಅರ್ಥವಾಗುವುದಿಲ್ಲ. ಕರ್ನಾಟಕ ರಾಜ್ಯದಿಂದ ಲೋಕಸಭೆಗೆ ಆರಿಸಿ ಹೋಗಿರುವಂತಹ ಕಾಂಗ್ರೆಸ್ ಪಕ್ಷದ ಲೋಕಸಭಾ ಸದಸ್ಯರುಗಳು ಈ ಸಂದರ್ಭದಲ್ಲಿ ಒಂದು ಸ್ಟೇಟ್‌ಮೆಂಟ್ ಕೂಡ ಕೊಟ್ಟಿಲ್ಲ. ಈ ಬಗ್ಗೆ ಲೋಕಸಭೆಯಲ್ಲೂ ಸಹ ಪ್ರಸ್ತಾಪ ಮಾಡಿಲ್ಲ. ಪ್ರಧಾನಿಯವರನ್ನು ಭೇಟಿ ಮಾಡಿಲ್ಲ. ಕರ್ನಾಟಕದ ಜನತೆ ಅವರನ್ನು ಆರಿಸಿ ಕಳುಹಿಸಿರುವುದರಿಂದ ಅವರು ಬೇರೆ ಸಮಸ್ಯೆಗಳನ್ನು ಬಗೆ ಹರಿಸುವುದಕ್ಕೆ ಸಾಧ್ಯವಾಗದಿದ್ದರೂ, ಅದು ಅವರ ಕೈಯಲ್ಲಿ ಆಗಲಿಲ್ಲ. ಇಂತಹ ಸಂದರ್ಭ ಬಂದಾಗ ಅವರು ಸಂಬಂಧಪಟ್ಟ ಅಧಿಕಾರಿಗಳನ್ನು ಅಥವಾ ಪ್ರಧಾನಮಂತ್ರಿಗಳನ್ನು ಭೇಟಿ ಮಾಡುವುದು ಉಚಿತ ಜನ ಇದನ್ನು ಸಹಿಸಿಕೊಳ್ಳುವುದಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ, ಕೇಂದ್ರ ಸರ್ಕಾರದ ಜೊತೆ ಸಂಪರ್ಕ ಮಾಡಿದ್ದೀರಾ ? ಈ ಬಗ್ಗೆ ಸರ್ಕಾರದ ನಿಲುವು ಏನು ? ಆ ರೀತಿ ರೆಸಲ್ಯೂಷನ್ ಮಾಡುವುದರಿಂದ ಒಳ್ಳೆಯದು ಆಗಬಹುದು. ಒಕ್ಕೊರಲಿನಿಂದ ಒಂದು ರೆಸಲ್ಯೂಷನ್ ಮಾಡಿ ಕೇಂದ್ರ ಸರ್ಕಾರದ ನೀತಿಯನ್ನು ಪ್ರಶ್ನಿಭಟಿಸಿ ಒಂದು ವ್ಯವಸ್ಥೆಯನ್ನು ತಕ್ಷಣ ಮಾಡಬೇಕೆಂದು ಒಂದು ರೆಸಲ್ಯೂಷನ್ ಕಳುಹಿಸುವ ವ್ಯವಸ್ಥೆಯನ್ನು ಮಾಡ ಬೇಕೆಂದು ತಮ್ಮ ಮೂಲಕ ಸಭಾನಾಯಕರನ್ನು ಒತ್ತಾಯ ಮಾಡುತ್ತೇನೆ.

† ಶ್ರೀ ಎ. ಕೆ, ಆನಂತಕೃಷ್ಣ.—ಮಾನ್ಯ ಅಧ್ಯಕ್ಷರೆ, ಈ ವಿಷಯ ಬಹಳ ಗಂಭೀರವಾದ ವಿಷಯ ನಾನು ಭಾವಿಸಿದ್ದೇನೆ. ಯಾವುದೇ ಕಾರ್ಮಿಕರ ಸಂಘಟನೆ ಅವರ ಒಂದು ಮೂಲಭೂತವಾದ ಹಕ್ಕು. ಅವರ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ಮಾಡುವಾಗ ಕೆಲವು ಸಂದರ್ಭಗಳಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಅದು ಇಲ್ಲವೆಂದು ನಾನು ಹೇಳುವುದಿಲ್ಲ. ರೈಲ್ವೆ ಕಾರ್ಮಿಕರು ಮುಷ್ಕರ ಹೂಡಿದಾಗ ಪ್ರಯಾಣಿಕರಿಗೆ ತೊಂದರೆಯಾಗುತ್ತದೆ. ಹಾಗೆಯೇ ದೂರವಾಣಿ ಇಲಾಖೆಯ ನೌಕರರು ಹೋರಾಟ ಮಾಡುತ್ತಿದ್ದಾರೆ. ಆದರಿಂದ ನಾಗರೀಕರಿಗೆ ತೊಂದರೆಯಾಗುತ್ತಿದೆ. ನಾಗರೀಕರಿಗೆ ತೊಂದರೆಯಾಗದ ರೀತಿಯಲ್ಲಿ ಅವರ ಮೂಲಭೂತ ಹಕ್ಕುಗಳು ಏನಿವೆ ಅವನ್ನು ಸೂಕ್ತ ಸಮಯದಲ್ಲಿ ಬಗೆ ಹರಿಸಬೇಕಾದ್ದು ಸಂಬಧಪಟ್ಟ ಸರ್ಕಾರಕ್ಕೆ ಸೇರಿದ್ದು. ಇವತ್ತಿನ ಪರಿಸ್ಥಿತಿಯಲ್ಲಿ ಕೇಂದ್ರಸರ್ಕಾರ, ಸೋಶಿಯಲಿಸ್ಟ್ ಸರ್ಕಾರ ಹೆಚ್ಚು ಜವಾಬ್ದಾರಿಯಿಂದ ಈ ಪರಿಸ್ಥಿತಿಯನ್ನು ಬಗೆಪರಿಸುವುದು ಆದ ಕರ್ತವ್ಯವಾಗಿದೆ. ರಾಜ್ಯದಲ್ಲಿ ಪಿಆಂಡ್‌ಟಿ ಇಲಾಖೆಯ ಕಾರ್ಮಿಕರು ಹೋರಾಟ ಮಾಡುತ್ತಿರುವುದರಿಂದ ಈ ದಿಸೆಯಲ್ಲಿ ರಾಜ್ಯಸರ್ಕಾರದ ಜವಾಬ್ದಾರಿಯೂ ಕೂಡ ಸಾಕಷ್ಟು ಇದೆಯೆಂದು ಈ ಸಂದರ್ಭದಲ್ಲಿ ಹೇಳ ಬೇಕಾಗಿದೆ ಆದ್ದರಿಂದ ರಾಜ್ಯಸರ್ಕಾರ ಅತಿ ವೇಗವಾಗಿ ಈ ಕಾರ್ಮಿಕರ ಸಮಸ್ಯೆ ಏನಿದೆ ಅದನ್ನು ಬಗೆಹರಿಸಬೇಕು.

೧೧-೪೫ ಪಿ. ಎಂ.

ಮತ್ತು ಸರ್ವದೃಷ್ಟಿಯಲ್ಲಿ ಸರ್ವರಿಗೂ ಅನುಕೂಲ ಮಾಡಿಕೊಡುವ ಹಾಗೆ ಮಾಡಬೇಕು. ಈ ಪ್ರಯತ್ನದಲ್ಲಿ ಕಾರ್ಮಿಕರು ಮತ್ತು ಅವರ ಕುಟುಂಬವರ್ಗದವರಿಗೆ ನೇರವಾಗಿಯಾಗಲೀ ಪರೋಕ್ಷವಾಗಿ ಯಾಗಲೀ ಯಾವುದೇ ರೀತಿಯಾದ ಅವಮಾನುಷವಾಗಿ ತೊಂದರೆಯನ್ನು ಮಾಡುವುದರಿಂದ ಒಂದು ತಪ್ಪನ್ನು ಮತ್ತೊಂದು ತಪ್ಪಿನಿಂದ ಸರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಭಾವನೆ ಏನಿದೆ ಅದು ತಪ್ಪಾಗುತ್ತದೆ. ಆದ್ದರಿಂದ ಆ ಕಾರ್ಮಿಕರ ವಿರುದ್ಧವಾಗಿ ಯಾವುದೇ ಕಾರ್ಯಕ್ರಮವನ್ನು ಅನಾವಶ್ಯಕವಾಗಿ ಮಾಡುವುದನ್ನು ಬಿಟ್ಟು ರಾಜ್ಯಸರ್ಕಾರ ಮತ್ತು ಕೇಂದ್ರಸರ್ಕಾರ ಎರಡೂ ಈ

ದಿಸೆಯಲ್ಲಿ ತೀವ್ರವಾಗಿ ಗಮನಹರಿಸಿ ಕೆಲಸ ಮಾಡಬೇಕು. ಇನ್ನೊಂದು ಕೆಲಸ ಮಾತ್ರ ಮಾಡುವುದಕ್ಕೆ ಸಾಧ್ಯ ಉಂಟು. ರಾಜ್ಯಮಟ್ಟದ ನಾಗರೀಕರ ಪರವಾಗಿ ನಾವು ಅವರ ಪ್ರತಿನಿಧಿಗಳಾಗಿ, ನಾಗರೀಕರಿಗೆ ಏನು ತೊಂದರೆಯಾಗಿದೆ ಎಂಬುದನ್ನು ಪ್ರತಿಭಟನೆ ಮಾಡುವಂಥ ರೀತಿಯಲ್ಲಿ ಕೇಂದ್ರಸರ್ಕಾರಕ್ಕೆ ರಾಜ್ಯ ಸರ್ಕಾರ ತಿಳಿಸುವುದು ನಮ್ಮ ಕರ್ತವ್ಯವಾಗಿದೆ. ಮತ್ತು ಈಗ ನಮ್ಮದೇ ಆದ ನಮ್ಮ ಜನರ ಕಷ್ಟ ಇದೆ. ಇದನ್ನು ಸಾಕಷ್ಟು ಪ್ರತಿಭಟಿಸಿದ್ದೇವೆ. ಇಷ್ಟು ಸಾಕು ಎಂದು ಹೇಳಿ ಈ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಯವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ಉಪನಾಯಕರು ಮತ್ತು ಉಳಿದ ಮಾನ್ಯ ಸದಸ್ಯರು ವ್ಯಕ್ತಪಡಿಸಿರತಕ್ಕಂಥ ವಿಚಾರ ಅತಿ ಮಹತ್ವವಾದದ್ದು ಎನ್ನತಕ್ಕಂಥ ವಿಷಯದಲ್ಲಿ ಭಿನ್ನಾಭಿಪ್ರಾಯ ಇಲ್ಲ. ಇವತ್ತು ಟೆಲಿಫೋನ್ ಇಲಾಖೆಗೆ ಸಂಬಂಧಪಟ್ಟಿರತಕ್ಕಂಥ ಈ ವಿಚಾರ ನಮ್ಮ ವ್ಯಾಪ್ತಿಯಲ್ಲಿ ಇಲ್ಲವೆಂಬ ಅರಿವು ಇದ್ದೇ ಮಾನ್ಯ ಸದಸ್ಯರೆಲ್ಲರೂ ಪ್ರಸ್ತಾಪ ಮಾಡಿದ್ದಾರೆ. ಈ ವಿಷಯ ನಮಗೆ ಸಂಬಂಧವಿಲ್ಲವೆಂದು ಸುಮ್ಮನೆ ಕುಳಿತುಕೊಂಡುಬಿಟ್ಟರೆ, ಕೇಂದ್ರಸರ್ಕಾರದ ಮೇಲೆ ಮತ್ತು ಮುಷ್ಕರದಲ್ಲಿ ನಿರತರಾಗಿರತಕ್ಕಂಥ ಸಂಘಸಂಸ್ಥೆಗಳ ಮೇಲೆ ಸ್ವಲ್ಪವಾದರೂ ಕೂಡ ರಾಜ್ಯಸರ್ಕಾರ ಜನತೆ ಒತ್ತಡವನ್ನು ತರದೇ ಇದ್ದರೆ ನಮ್ಮ ಕರ್ತವ್ಯವನ್ನು ನಾವು ಮಾಡಿಲ್ಲವೆಂದು ಹೇಳುವುದಕ್ಕಿಂತ ಹೆಚ್ಚಾಗಿ ಈ ಒತ್ತಡದ ಅರಿವು ಅವರಿಗೆ ಇದ್ದರೆ ಒಳ್ಳೆಯದೆಂಬ ದೃಷ್ಟಿಯಿಂದ ಇದನ್ನು ಅನಿವಾರ್ಯವಾಗಿ ಮಾಡಬೇಕಾಗಿದೆ. ಈಗಾಗಲೇ ಈ ವಿಚಾರದಲ್ಲಿ ನಾವು ಕೇಂದ್ರಸರ್ಕಾರವನ್ನು ಸಂಪರ್ಕ ಮಾಡಿದ್ದೇವೆ. ಅವರ ಬೇಡಿಕೆಗಳು ಏನಿವೆ ಅದರ ವಿವರಕ್ಕೆ ನಾನು ಹೋಗತಕ್ಕದ್ದು ಸೂಕ್ತ ಅಲ್ಲ ಮತ್ತು ಅದು ನನಗೆ ಸಂಬಂಧವೂ ಅಲ್ಲ. ಅವರ ಬೇಡಿಕೆಗಳನ್ನು ಕೂಲಂಕಶವಾಗಿ ನೋಡಿ ಕೇಂದ್ರಸರ್ಕಾರದವರೇ ತೀರ್ಮಾನ ಮಾಡಬೇಕು. ಸುಪ್ರಾರಾಗಿ ನನಗೆ ಗೊತ್ತಿರುವ ಹಾಗೆ ಇದು ತೀರ್ಮಾನ ಮಾಡುವುದಕ್ಕೆ ತಡ ಏತಕ್ಕೆ ಆಗಿದೆಯೆಂದರೆ, ಮುಷ್ಕರ ಮಾಡುತ್ತಿರುವುದು ಈಗ ಮಾತ್ರವಲ್ಲ ಕೆಲವು ತಿಂಗಳ ಹಿಂದೆ ಸಹ ಒಂದು ಸಾರಿ ಮುಷ್ಕರ ಆಗಿತ್ತು ಎಂದು ನನ್ನ ಭಾವನೆ. ಆಗಲೂ ಕೂಡ ಇದೇರೀತಿ ತೊಂದರೆ ಆಗಿತ್ತು. ಈಗ ನಾವು ಕೂಡಲೇ ಇದರ ಬಗ್ಗೆ ತೀರ್ಮಾನ ಮಾಡಬೇಕೆಂದು ಕೇಂದ್ರಸರ್ಕಾರಕ್ಕೆ ಹೇಳುತ್ತಿದ್ದೇವೆ. ಅಲ್ಲಿ ತೀರ್ಮಾನ ಮಾಡತಕ್ಕದ್ದನ್ನು ಅಧಿಕಾರಿಗಳ ಮಟ್ಟಕ್ಕೆ ಬಿಟ್ಟರೆ ಅದು ಆಗುವುದಿಲ್ಲ ಎಂಬ ಒಂದು ಅಭಿಪ್ರಾಯ ಇತ್ತು. ಕೆಲವು ರಾಜಕೀಯ ವಿದ್ಯಮಾನಗಳ ಬೆಳವಣಿಗೆ ದೃಷ್ಟಿಯಿಂದ ಜವಾಬ್ದಾರಿಯಿಂದ ಯಾರೊಬ್ಬರು ಸಚಿವರು ತೀರ್ಮಾನ ಮಾಡತಕ್ಕಂಥ ಪರಿಸ್ಥಿತಿ ಅಲ್ಲಿ ಇರಲಿಲ್ಲ. ಆ ವಿವರಕ್ಕೆ ನಾವು ಹೋಗುವುದಿಲ್ಲ. ಆದರೆ ಪರಿಸ್ಥಿತಿ ಹಾಗೆ ಇತ್ತು. ಅಧಿಕಾರಿಗಳ ಮಟ್ಟದಲ್ಲಿ ಅವರ ಬೇಡಿಕೆಗಳಿಗೆ ಸಂಬಂಧಪಟ್ಟಂತೆ ತೀರ್ಮಾನ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಎನ್ನತಕ್ಕಂಥ ವಿಚಾರ ಉದ್ಭವವಾಗಿದ್ದರಿಂದ ತತ್‌ಕ್ಷಣ ತೀರ್ಮಾನ ಆಗುವುದಕ್ಕೆ ಸಾಧ್ಯವಾಗಲಿಲ್ಲ ಎನ್ನತಕ್ಕ ಅಂಶ ನಮ್ಮ ಗಮನಕ್ಕೆ ಬಂದಿದೆ. ನಾವು ರಾಜ್ಯ ಸರ್ಕಾರದವರಂ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಒತ್ತಡ ತಂದಿದ್ದೇವೆ. ಈಗಲೂ ಕೂಡ ತಮ್ಮೆಲ್ಲರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಸದನದ ಅಭಿಪ್ರಾಯಗಳನ್ನು ನಾವು ಕೇಂದ್ರ ಸರ್ಕಾರಕ್ಕೆ ತಿಳಿಸುತ್ತೇವೆ ಮತ್ತು ಮುಷ್ಕರದಲ್ಲಿ ನಿರತರಾಗಿರತಕ್ಕಂಥ ಸಂಘ ಸಂಸ್ಥೆಗಳು ಕೂಡ ಇದನ್ನು ಅರಿಯಬೇಕು. ಏಕೆಂದರೆ ಪತ್ರಿಕೆಗಳ ಮುಖಾಂತರ ಇದೆಲ್ಲ ಬರುತ್ತದೆ. ಇದು ಸಾರ್ವಜನಿಕ ಸೇವೆಗಳ ಅಂದರೆ ಅಗತ್ಯಸೇವೆಗಳ ಆಡಿಯಲ್ಲಿ ಬರತಕ್ಕಂಥ ವಿಚಾರ. ಈ ವಿಚಾರವನ್ನು ಅವರು ಕೂಡ ಅರ್ಥಮಾಡಿಕೊಂಡು ಜನತೆಗೆ ಎಷ್ಟೊಂದು ತೊಂದರೆಯಾಗುತ್ತಿದೆ ಎನ್ನುವುದನ್ನು ತಿಳಿಯಬೇಕು. ಅವರ ಬೇಡಿಕೆಗಳು ನ್ಯಾಯಯುತವಾಗಿಲ್ಲ ಎಂಬ ಅಭಿಪ್ರಾಯ ನಮಗಿಲ್ಲ. ಏಕೆಂದರೆ ಅದರ ಬಗ್ಗೆ ಅಭ್ಯಾಸ ಮಾಡದೆ ನಾವು ಹೇಳುವುದು ಅಷ್ಟು ಒಳಿತಲ್ಲ. ಆದರೆ ಈರೀತಿ ಆಗುತ್ತಿರುವುದರಿಂದ ಎಷ್ಟು ತೊಂದರೆಯಾಗುತ್ತಿದೆ ಎಂದರೆ, ಮೊನ್ನೆ ಮಂತ್ರಿಮಂಡಲ ವಿಸ್ತರಣೆ ಮಾಡುವ ಸಂದರ್ಭದಲ್ಲಿ ಫೋನ್ ಮಾಡಿ ಎಲ್ಲೆಲ್ಲಿ ಸದಸ್ಯರು ಇದ್ದಾರೆ ಎಂದು ತಿಳಿದು ಅವರನ್ನು ಕರೆಸಬೇಕಂ ಎಂದರೆ ಆಗಲಿಲ್ಲ.

ಅಧ್ಯಕ್ಷರು.—ನಿಮಗೆ ಬಹಳ ತೊಂದರೆಯಾಗಿರಬೇಕು.

ಶ್ರೀ ಎಸ್. ಬಂಗಾರಪ್ಪ.—ನಿಜ ಹೇಳಬೇಕು ಎಂದರೆ ಇಬ್ಬರು–ಮೂವರು ಜನ ತಡವಾಗಿ ಬಂದು ಪ್ರಮಾಣ ವಚನ ಸ್ವೀಕರಿಸುವುದಕ್ಕೆ ಇದೇ ಕಾರಣ ಕೊನೆಗೆ ವೈರ್‌ಲೆಸ್ ಮುಖಾಂತರ ವಿಷಯ ತಿಳಿಸಿ ಅವರನ್ನು ಕರೆಸಬೇಕಾಯಿತು. ಸುಮ್ಮನೆ ಈ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈಗ ತೊಂದರೆಯಂತೂ ಸಿಕ್ಕಾಪಟ್ಟೆಯಾಗಿದೆ. ನಮ್ಮ ಮೊಳಕಾಲ್ಮೂರಿನ ಶಾಸಕರಾದ ಎನ್. ಜಿ. ನಾಯಕರು ಹೇಳಿದರು. ಅವರು ನಮಗೆಲ್ಲರಿಗೂ ನಾಯಕರಾಗಿರುವುದರಿಂದ ಅವರ ಹೆಸರನ್ನು ಪ್ರಸ್ತಾಪ ಮಾಡಲೇಬೇಕು. ಏಕೆಂದರೆ ನಾವು ನೀವು ನಾಯಕರಾಗುವುದು ಬಹಳ ಕಷ್ಟ. ಅವರ ತಂದೆ ಮೊದಲೇ ನಾಯಕರು ಎಂದು ಹೆಸರಿಟ್ಟು ಈ ಪ್ರಪಂಚಕ್ಕೆ ಕಳುಹಿಸಿಕೊಟ್ಟಿದ್ದಾರೆ. ಅವರು ಏನು

ಹೇಳಿದರು ಎಂದರೆ, ಮುಖ್ಯಮಂತ್ರಿಗಳು, ನೀವೆಲ್ಲಾ ಫೋನ್ ಇವೆಲ್ಲ ಹೈಕ್ಲಾಸ್ ಜಾಗ ಇಟ್ಟು ಕೊಂಡಿದ್ದೀರಿ ನಮಗೆ ಬಹಳ ತೊಂದರೆಯಾಗಿದೆ, ನಾವು ಎಲ್ಲೆಲ್ಲೋ ಹೋಗಬೇಕು ಎಂದರು. ಅದಕ್ಕೆ ದಯವಿಟ್ಟು ನೀವು ಎಲ್ಲೆಲ್ಲಿ ಹೋಗಬೇಕು ಎಂದು ಹೇಳಿ ನಾವೂ ಕೂಡ ಅಲ್ಲಿಯೇ ಹೋಗಿ ಫೋನ್ ಮಾಡಿಕೊಂಡು ಬರುತ್ತೇವೆ ದಯಮಾಡಿ ಹೇಳಿ ಅದು ಏನೇ ಇರಲ್ಲಿ ಸದನದ ಎಲ್ಲಾ ಮೂಲೆಗಳಿಂದಲೂ ವ್ಯಕ್ತವಾಗಿರುವ ಕಳಕಳಿ ನನಗೆ ಅರ್ಥವಾಗುತ್ತದೆ. ಎಲ್ಲರಿಗೂ ತೊಂದರೆಯಾಗಿರುವುದು ನಿಜ. ಈ ಸದನದ ಸದಸ್ಯರಿಗೆ, ಸಾರ್ವಜನಿಕರಿಗೆ, ಸರ್ಕಾರಕ್ಕೆ, ಎಲ್ಲರಿಗೂ ಬಹಳ ತೊಂದರೆಯಾಗಿರುವುದು ಸರ್ವವೇದ್ಯ ಈ ಸಂದರ್ಭದಲ್ಲಿ ನಾನು ಇಷ್ಟುಮಾತ್ರ ಹೇಳಬಲ್ಲೆ. ನಮ್ಮ ವ್ಯಾಪ್ತಿ ಎಷ್ಟು ಎನ್ನುವುದು ತಮಗೆ ಗೊತ್ತಿದೆ ಅದರಂತೆ ಹೇಳಿದ್ದೀರಿ, ನಾನು ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುತ್ತೇವೆ. ಈ ಬಗ್ಗೆ ಒತ್ತಡವನ್ನು ತರುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆ ಸಂಘದಪರಲ್ಲಿಯೂ ಕೂಡ ನಾನು ವಿನಂತಿ ಮಾಡುತ್ತೇನೆ, ಕೂಡಲೇ ಮಾತುಕತೆ ಮಾಡಿ. after all in a democratic set up mutual discussion is the best way. ಕುಳಿತುಕೊಳ್ಳಬೇಕು, ಮಾತನಾಡಬೇಕು ಒಂದು ತೀರ್ಮಾನಕ್ಕೆ ಬರಬೇಕು. ಕೇಂದ್ರದಲ್ಲಿ ರಾಜಕೀಯ ವಿದ್ಯಮಾನಗಳಿಂದಾಗಿ ತೀರ್ಮಾನ ಮಾಡುವುದಕ್ಕೆ ಸ್ವಲ್ಪ ತೊಂದರೆಯಾಗಿರಬಹುದು. ಅದನ್ನು ಕಂಡು ನಾವು ಮುಷ್ಕರವನ್ನು ಮುಂದಕ್ಕೆ ಹಾಕಿದ್ದೇವೆ ಎಂದು ಅವರೇ ಹೇಳಿಕೊಳ್ಳಬಹುದಾಗಿತ್ತು. ಆಗ ಏನೂ ತೊಂದರೆ ಆಗುತ್ತಿರಲಿಲ್ಲ. ಕೇಂದ್ರದಲ್ಲಿ ಸರ್ಕಾರ ಒಂದು ಸ್ಥಿಮಿತಕ್ಕೆ ಬಂದಮೇಲೆ ನಾವು ಮಾತುಕತೆ ಮಾಡುತ್ತೇವೆ ಎಂದು ಹೇಳಿದ್ದರೆ ಪರವಾಯಿಲ್ಲ ಅವರೂ ಕೂಡ ಅರ್ಥ ಮಾಡಿಕೊಂಡಿದ್ದಾರೆ, ಸಾರ್ವಜನಿಕರಿಗೆ ತೊಂದರೆಯಾಗಿರುವುದನ್ನು ಅರ್ಥಮಾಡಿಕೊಂಡು ವ್ಯವಹಾರ ಮಾಡುತ್ತಿದ್ದಾರೆ ಎಂಬುದು ಗೊತ್ತಾಗುತ್ತಿತ್ತು. ಆಗ ನಿಜವಾಗಲು ಅವರ ಬೇಡಿಕೆಗಳ ಬಗ್ಗೆ ಸಾರ್ವಜನಿಕರ ಸಹಾನುಭೂತಿ ಸರ್ಕಾರದ ಸಹಾನುಭೂತಿ ಪಡೆಯುವುದಕ್ಕೆ ಸಾಧ್ಯವಿತ್ತು. ಈ ರೀತಿ ಅವರು ಮಾಡಬಹುದಿತ್ತು. ಅದೇನೇ ಇರಲಿ, ಈ ಸಂದರ್ಭದಲ್ಲಿ ಆ ಟೆಲಿಕಾಂ ಸಂಘಕ್ಕೆ ನಾನು ವಿನಂತಿ ಮಾಡುತ್ತೇನೆ. ಇದನ್ನು ಕೂಡಲೇ ಬಗೆಹರಿಸಿ, ಸಾರ್ವಜನಿಕರಿಗೆ ಆಗಿರತಕ್ಕ ಸರ್ಕಾರಕ್ಕೆ ಆಗಿರತಕ್ಕ ತೊಂದರೆಯನ್ನು ತಪ್ಪಿಸಬೇಕೆಂದು ವಿನಂತಿ ಮಾಡುತ್ತೇನೆ. ಮತ್ತು ಕೇಂದ್ರಸರ್ಕಾರಕ್ಕೂ ವಿನಂತಿ ಮಾಡುತ್ತೇನೆ ಮತ್ತು ಒತ್ತಡವನ್ನು ತರುತ್ತೇನೆ.

ಶ್ರೀ ಜಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಸದನದ ಅಭಿಪ್ರಾಯವನ್ನು ಕಳುಹಿಸಿ ಕೊಡುವಾಗ ಇಲ್ಲಿ ರೆಸಲ್ಯೂಷನ್ ಮಾಡಿದರೆ ಆಗ ನೀವು ಸದಸದ ಅಭಿಪ್ರಾಯವನ್ನು ಕಳುಹಿಸಿಕೊಡಬಹುದು. ಇಲ್ಲಿದೇ ಹೋದರೆ ಸರ್ಕಾರ ಕಳುಹಿಸಿಕೊಡುವುದಕ್ಕೆ ಬರುವುದಿಲ್ಲ. ಅದಕ್ಕೆ ನಾನು ಹೇಳಿದೆ ಮಾನ್ಯ ಸಭಾನಾಯಕರು ಮಾತನಾಡುವಾಗ ಸದನದ ಅಭಿಪ್ರಾಯವನ್ನು ಕಳುಹಿಸುತ್ತೇನೆ ಎಂದು ಹೇಳಿದರು. ನೀವು ಯಾವರೀತಿ ಕಳುಹಿಸಿಕೊಡುತ್ತೀರಿ. ಸದನದ ಅಭಿಪ್ರಾಯವನ್ನು ಕಳುಹಿಸಬೇಕಾದರೆ ಅಧ್ಯಕ್ಷರಿಗೆ ಅವಕಾಶ ಇರುವಂಥಾದ್ದು. ನೀವು ಯಾವರೀತಿ ಕಳುಹಿಸಿಕೊಡುತ್ತೀರಿ ಎಂದು ಕೇಳುತ್ತೇನೆ. ನಾನು ರೆಸಲ್ಯೂಷನ್ ಆಗಲೇಬೇಕೆಂದು ಒತ್ತಾಯ ಮಾಡುತ್ತಿಲ್ಲ. ಇದರ ಇಂಪಾರ್ಟೆನ್ಸ್ ತಮಗೆ ಗೊತ್ತಿದೆ, ಯಾವರೀತಿ ಮಾಡುತ್ತಿರೋ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ನಾಳೆ ಸಂಜೆ ೫–೩೦ಕ್ಕೆ ಪ್ರಧಾನ ಮಂತ್ರಿಗಳು ಬೆಂಗಳೂರಿಗೆ ಬರುವ ಕಾರ್ಯಕ್ರಮ ಇದೆ. ನಾವೆಲ್ಲರೂ ಸೇರಿ ಒಟ್ಟಿಗೆ ಹೋಗೋಣ. ದೇಶದ ಪ್ರಧಾನ ಮಂತ್ರಿಗಳು ಬಂದಾಗ ಎಲ್ಲರೂ ಹೋಗೋಣ. ಅವರ ಪತ್ರಿಕ ಮಾತನಾಡೋಣ. ಮಾನ್ಯ ಸಭಾಧ್ಯಕ್ಷರೂ ಸೇರಿಕೊಂಡಂತೆ ಈ ಸದನದ ಎಲ್ಲಾ ಮೂಲೆಗಳಿಂದಲೂ, ಈ ವಿಚಾರದಲ್ಲಿ ಏನು ಅಭಿಪ್ರಾಯ ಬಂದಿದೆ ಎನ್ನುವುದನ್ನು ನಾವು ಬರವಣಿಗೆಯಲ್ಲಿ ಪ್ರಧಾನ ಮಂತ್ರಿಗಳಿಗೆ ತಿಳಿಸಂತ್ತೇನೆ ಎಂದಂ ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಸದನಕ್ಕೆ ಹೇಳುತ್ತೇನೆ.

ಅಧ್ಯಕ್ಷರು.—ಈ ವಿಷಯ ಬಹಳ ಮಹತ್ವವಾದುದು ಸಾರ್ವಜನಿಕರಿಗೆ, ಶಾಸನಸಭಾ ಸದಸ್ಯರಿಗೆ ತಮ್ಮ ದಿನನಿತ್ಯದ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಅಡಚಣೆ ಉಂಟಾಗಿದೆ ಎನ್ನುವ ದೃಷ್ಟಿಯಿಂದ ಹೇಳಬೇಕಾಗಿರತಕ್ಕ ಎಲ್ಲಾ ಸದಸ್ಯರಿಗೂ ನಾನು ಅವಕಾಶವನ್ನು ಕೊಟ್ಟಿರತಕ್ಕಂಥಾದ್ದು ಮುಖ್ಯ ಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಕೇಂದ್ರಸರ್ಕಾರದಲ್ಲಿ ಈಗಾಗಲೇ ಸಂಪರ್ಕಶಾಖೆ ಸಚಿವರು ಇದ್ದಾರೆ, ಅವರ ಜೊತೆಯಲ್ಲಿ ಮಾತನಾಡಿ, ಈ ವಿಚಾರವನ್ನು ಸಂಲಲಿತವಾಗಿ ತೀರ್ಮಾನವಾಗಲಿ ಎಂದು ಹಾರೈಸುತ್ತೇನೆ.